ರಕ್ತದ ಮಾದರಿಯನ್ನು ನಾವು ಈಗಾಗಲೇ ಪರೀಕ್ಷೆಗಾಗಿ ಕಳಿಸಿದ್ದೇವೆ. ಇನ್ನು ಸರೀಸೃಪ! ಅದು ಕಾಡು ಸ್ವಾಮಿ. ಹೆಬ್ಬಾವು ಅಲ್ಲಿ ಹರಿದುಕೊಂಡು ಹೋಗಿರಬೇಕು, ಅಷ್ಟೇ!"

"ಮೋಹಿತನ ಚರವಾಣಿಗೆ ಕರೆ ಮಾಡಿ ನೋಡಿದ್ರಾ? ಅದು ಕೆಲವೊಮ್ಮೆ ಕರೆದನಿ ಹೊರಡಿಸುತ್ತೆ. ಹೆಚ್ಚಾಗಿ 'ನಾಟ್ ರೀಚೆಬಲ್' ಅಂತ ಬರ್ತಿದೆ…''

"ಹಾಗೆ ಆಗ್ಲೇ ಬೇಕಲ್ವೆ, ಕರಮಚಂದ್! ಅವ್ನು ಕಾಡಲ್ಲಿ ಅವಿತಿರಬೇಕು. ಅಲ್ಲಿ ಸಿಗ್ನಲ್ ಕೆಲವೊಮ್ಮೆ ಸಿಗುತ್ತಿರಬೇಕು, ಅರ್ಥವಾಯ್ತಾ?"

"ಆ ಸಾಲಗಾರ ಯಾರೆಂದು ಗೊತ್ತಾಯಿತೆ?"

ಕರಮಚಂದನ ಪ್ರಶ್ನೆಗೆ ಡಿಸೋಜ ಶೀಘ್ರದಲ್ಲೇ ಪತ್ತೆ ಮಾಡುವುದಾಗಿ ಹೇಳಿದ. ಪ್ರಕರಣದ ಬಗ್ಗೆ ಪೊಲೀಸರ ಸಿದ್ಧಾಂತ ತಿಳಿದುಕೊಂಡ ನಂತರ ನಾವು ಭೇಟಿಯಾಗಿದ್ದು ಆ ಬೀಡಾಬೀಡಿಯ ಅಂಗಡಿಯವನನ್ನು. ಆಗಲೇ ಬಿಸಿಲು ಚುರುಕು ಪಡೆದುಕೊಂಡಿತ್ತು. ಕರಮಚಂದನ ಪ್ರಶ್ನೆಗೆ ಆತ ಒಮ್ಮೆ ತಲೆ ಕೆರೆದುಕೊಂಡ. ತುಸು ಹೊತ್ತು ನೆನಪು ತಡಕಾಡಿದ ಅವನು, ಒಮ್ಮೆಗೇ ಏರುದನಿಯಲ್ಲಿ ನುಡಿದ,

"ನೆನಪಾಯ್ತು! ಕ್ರಚಸ್ ಹಿಡಿದ, ಹ್ಯಾಟುಧಾರಿ!! ಆತನ ಬಲಗಾಲು ಊನ. ಅವ್ನು ಭಾಳ ಸಮಯದ ಹಿಂದೊಮ್ಮೆ ಬಂದಿದ್ದ. ನಮ್ ಅಂಗ್ಡೀಲೇ ನಿಂತಿದ್ದ. ಆಮೇಲೆ ಮೇಡಮ್ ಬಂದು, ಕಾರಿನಲ್ಲಿ ಕರೆದುಕೊಂಡು ಹೋದ್ರು. ಆಮೇಲೆ ನಾನವನ್ನ ಕಂಡಿದ್ದೇ ಇಲ್ಲ."

ಅಲ್ಲಿಂದ ನಾವು ತೆರಳಿದ್ದು ವಕೀಲ ಪೂಣಚ್ಚನ ಕಚೇರಿಗೆ. ಅದೃಷ್ಟವಶಾತ್ ಅವನು ಕೋರ್ಟಿಗೆ ಹೋಗಿರಲಿಲ್ಲ. ಆಗಲೇ ಗಂಟೆ ಹನ್ನೆರಡು ಸಮೀಪಿಸಿತ್ತು. ಮೋಹಿತ್ ಉಯಿಲು ಮಾಡಿದ್ದನೆ ಎಂದು ಅರಿಯುವುದಷ್ಟೇ ಕರಮಚಂದನ ಉದ್ದೇಶವಾಗಿತ್ತು. ಪೂಣಚ್ಚ ಅದನ್ನು ದೃಢಪಡಿಸಿದ. ಉಯಿಲಿನ ಮೂಲಪ್ರತಿ ಮೋಹಿತನ ಬ್ಯಾಂಕ್ ಲಾಕರಿನಲ್ಲಿ ಇದೆಯೆಂದು ಹೇಳಿದ. ಅಂತಿಮ ಪ್ರತಿ ಮಾಡುವ ಮುನ್ನ ಉಯಿಲಿನ ಕರಡು ಪ್ರತಿಯನ್ನು ನೀಡಿದ್ದೆ ಎಂಬ ಅವನ ನುಡಿಗಳು ಮೋಹಿತನ ಮನೆಯಲ್ಲಿ ಕಂಡ ಉಯಿಲಿನ ಸಾಚಾತನವನ್ನು ಸಾಬೀತುಪಡಿಸಿದವು. ನಂತರ ನಾವು ಹೊಟೇಲೊಂದರಲ್ಲಿ ಊಟ ಮುಗಿಸಿದೆವು. ಮಧ್ಯಾಹ್ನದ ಮೇಲೆ, ಕೆಲವು ಲಾಡ್ಜುಗಳಿಗೆ, ನಾಪೋಕ್ಲುವಿನ ಪೇಪರ್ ಏಜೆಂಟನನ್ನು ಮತ್ತು ವಿರಾಜಪೇಟೆಯಲ್ಲಿರುವ ಚರವಾಣಿ ಸೇವೆ ಒದಗಿಸುವ ಕಂಪೆನಿಯ ಶಾಖೆಗೆ ಭೇಟಿ ನೀಡಿ ತನಿಖೆ ನಡೆಸಲಿದೆ ಎಂದು ಕರಮಚಂದ ಹೇಳಿದ. ಆದರೆ ಕೋರ್ಟಿನಲ್ಲಿ ಪ್ರಕರಣವೊಂದರಲ್ಲಿ ದಾಖಲೆಪತ್ರವೊಂದನ್ನು ಹಾಜರು ಪಡಿಸುವ ಕೆಲಸ ಇದ್ದುದರಿಂದ ನನಗೆ ಅಲ್ಲಿಗೆ ಹೋಗಲು ಸೂಚಿಸಿದ. ಕರಮಚಂದನ ತನಿಖೆಯನ್ನು ಕಣ್ಣಾರೆ ವೀಕ್ಷಿಸುವ ಅವಕಾಶ ತಪ್ಪಿದ್ದಕ್ಕೆ, ಆ ನಮ್ಮ ಕಕ್ಷಿಗಾರನನ್ನು ಮನದಲ್ಲೇ ಶಪಿಸುತ್ತಾ ನಾನು ಬಸ್ ನಿಲ್ದಾಣದತ್ತ ಹೆಜ್ಜೆ ಹಾಕಿದೆ.

★★★

"ನಿನ್ನೆ ರಾತ್ರಿಯೂ ನೀನು ಹೊರಗೆ ಹೋದಂಗೆ ಇತ್ತು?"

ಚಹಾ ಹೀರುತ್ತಾ ನಾನು ಕರಮಚಂದನನ್ನು ವಿಚಾರಿಸಿದೆ. ಹೊರಗಡೆ ಮುಂಜಾನೆಯ ಎಳೆಬಿಸಿಲು ಹಿತವಾಗಿ ಹರಡಿತ್ತು.

ತನ್ನ ಪ್ರಿಯ ಹವ್ಯಾಸವಾದ ಗಣಕಯಂತ್ರದಲ್ಲಿ ಚೆಸ್ ಆಟದಲ್ಲಿ ಮಗ್ನನಾಗಿದ್ದ ಕರಮಚಂದ,